Sri D. DEVARAJ URS.—It is too late. Anyway, now that we have stated Government is interested in not only maintaining it but also developing this into a tourist complex, I think the hon. member should be satisfied Whatever might have happened 12 years' back, now the Government has taken note of it.

Excess Land available due to implementation of Land Reforms

881. Smt. RENUKA RAJENDRAN (Bagepalli) .—

Will the Minister for Revenue be pleased to state :—

(*a*) the number of ryots in each taluk who are having more than 18 standard acres of lands in the context of Land Reforms Act ;

(*b*) amongst landlords and ryots the number of cases wherein ryots are cultivating the lands ;

(*c*) the number of landless agriculturists families in each taluk ;

(*d*) the extent of land available due to implementation of land reforms ;

(*e*) the extent of forest land in each taluk ;

(*f*) out of this land, the extent of land where forests do not exist and is cultivable ?

Sri N. HUTCHAMASTHY GOWDA (Minister for Revenue).—

(*a*) to (*f*) These details have not been collected. It is not possible to furnish the information as it entails lot of time and establishment.

ಶ್ರೀಮತಿ ರೇಣುಕಾ ರಾಜೇಂದ್ರನ್.—ವಿವರಗಳನ್ನು ಸಂಗ್ರಹಿಸಲು ಹೆಚ್ಚು ಕಾಲ ಮತ್ತು ಸಿಬ್ಬಂದಿ ಬೇಕಾಗಿರುವುದರಿಂದ ವಿವರಗಳನ್ನು ಒದಗಿಸಲು ಸಾಧ್ಯವಿಲ್ಲ ಎಂದು ಉತ್ತರದಲ್ಲಿ ತಿಳಿಸಿದ್ದೀರಿ ; ಭೂಸುಧಾರಣಾ ಕಾನೂನನ್ನು ಜಾರಿಗೆ ತರುವುದಕ್ಕೆ ಮುಂಚೆ ಈ ಅಂಕಿ ಅಂಶಗಳನ್ನು ಸಂಗ್ರಹಣೆ ಮಾಡುತ್ತೀರಾ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಹಾಲಿ ಇರತಕ್ಕಂಥ ಭೂಸುಧಾರಣಾ ಕಾನೂನು ಪ್ರಕಾರ ಸೀಲಿಂಗಿಗಿಂತ ಹೆಚ್ಚು ಜಮೀನು ಇರುವವರು ಡಿಕ್ಲೇರ್ ಮಾಡಬೇಕಾಗಿತ್ತು. ಆದರೆ ಆದರಂತೆ ಕೆಲವರು ಮಾಡಿಲ್ಲ. ಆದರಿಂದ ಅಂಕಿ ಅಂಶಗಳನ್ನು ಸಂಗ್ರಹಣೆ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಈಗ ಮತ್ತೆ ಗರಿಷ್ಠ ಮಿತಿಯನ್ನು ಗೊತ್ತು ಮಾಡಿದ ಮೇಲೆ ಅಂಕಿಅಂಶಗಳನ್ನು ಸಂಗ್ರಹ ಮಾಡಬೇಕಾಗುತ್ತದೆ.

ಶ್ರೀಮತಿ ರೇಣುಕಾ ರಾಜೇಂದ್ರನ್.—ಗೇಣಿದಾರರ ಅನುಕೂಲಕ್ಕಾಗಿ ಮದ್ರಾಸ್ ರಾಜ್ಯದಲ್ಲಿ ಒಂದು ಕಾರ್ಪೊರೇಷನ್ ಮಾಡಿದ್ದಾರೆ. ಆ ಕಾರ್ಪೊರೇಷನ್ ಅವರು ಗೇಣಿದಾರರಿಗೆ ಸಾಲ ಕೊಟ್ಟು ಓವರ್ಸೀಸ್‌ಗೆ ಸಾಲ ತೀರಿಸಲು ಅವಕಾಶ ಮಾಡಿಕೊಟ್ಟಿದ್ದಾರೆ. ಅದರಂತೆ ಇಲ್ಲಿಯೂ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹೊಸದಾಗಿ ತಿದ್ದುಪಡಿ ತಂದ ಮೇಲೆ ಅದನ್ನೆಲ್ಲಾ ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.—ಅಂಕಿಅಂಶಗಳನ್ನು ಸಂಗ್ರಹ ಮಾಡಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಈಗ ಭೂಸುಧಾರಣೆಯನ್ನು ಜಾರಿಗೆ ತಂದಿರುವ ಉದ್ದೇಶ ಬಂಡವಾಳಶಾಹಿಯನ್ನು ಹೋಗಲಾಡಿಸಿ ಭೂಹೀನರಿಗೆ ರಕ್ಷಣೆ ಕೊಡಬೇಕೆಂಬ ತತ್ವದ ಮೇಲೆ ಅಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅನೇಕ ಸಂದರ್ಭಗಳಲ್ಲಿ ಅಂಕಿಅಂಶಗಳನ್ನು ಸಂಗ್ರಹ ಮಾಡಬೇಕಾಗಿರುವುದು ನಿಜ.

ಶ್ರೀ ಬಿ. ವಿ. ಕಕ್ಕಿಲಾಯ.—ಮೈಸೂರು ರಾಜ್ಯದಲ್ಲಿ ಲ್ಯಾಂಡ್ ಸೆನ್‌ಸಸ್ ಇರಾಖಿಯವರಿಗೆ ಅಂಕಿ ಅಂಶಗಳನ್ನು ಸಂಗ್ರಹಣೆ ಮಾಡಲು ಏನಾದರೂ ಇನ್‌ಸ್ಟ್ರಕ್ಷನ್ ಕೊಟ್ಟಿದ್ದೀರಾ ? ಆ ರೀತಿ ಕೊಟ್ಟಿದ್ದರೆ ಭೂಸುಧಾರಣಾ ಕಾನೂನು ಈ ಸಭೆಯ ಮುಂದೆ ಬರುವುದಕ್ಕೆ ಮೊದಲು ಅದನ್ನು ಒದಗಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಭೂಸುಧಾರಣ ಕಾನೂನು 1965ನೇ ಇಸವಿಯಲ್ಲಿಯೇ ಜಾರಿಗೆ ಬಂದಿದೆ. ಅದು ಬಂದು 7 ವರ್ಷಗಳಾಗಿವೆ. ಈ 7 ವರ್ಷಗಳಲ್ಲಿ ಯಾರು ಯಾರಿಗೆ ಗರಿಷ್ಠ ಮಿತಿಗಿಂತ ಹೆಚ್ಚು ಜಮೀನು ಇದೆಯೋ ಅದನ್ನು ಅವರು ಡಿಕ್ಲೇರ್ ಮಾಡಬೇಕಾಗಿತ್ತು. ಅದರಂತೆ ಕೆಲವರು ಮಾಡದಿರುವುದರಿಂದ ಈಗ ಅಂಕಿಅಂಶಗಳು ಕರಾರುವಾಕ್ಕಾಗಿ ಇಲ್ಲ. ಭೂಸುಧಾರಣಾ ಕಾನೂನಿಗೆ ಕೆಲವು ತಿದ್ದುಪಡಿಗಳು ಬರುವುದು ಇದೆ. ಆಗ ಹಂಚುವುದಕ್ಕೆ ಎಷ್ಟು ಭೂಮಿ ಸಿಗುತ್ತದೆಂಬ ಅಂಕಿಅಂಶಗಳನ್ನು ಸಂಗ್ರಹಿಸಿ ಸರ್ಕಾರ ಒದಗಿಸಿಕೊಡುತ್ತದೆ.

1-30 P.M.

ಶ್ರೀ ಕೋಣಂದೂರು ಲಿಂಗಪ್ಪ.—ತಾವು ಭೂಸುಧಾರಣೆಯ ತಿದ್ದುಪಡಿ ಮಸೂದೆಯನ್ನು ನಾಳೆ ಈ ಸಭೆಯಲ್ಲಿ ತಂದು ಆ ಮೇಲೆ ಈ ಅಂಕಿ ಅಂಶಗಳನ್ನು ಸಂಗ್ರಹಿಸುತ್ತೇವೆ ಎಂದು ಹೇಳುವ ಮಾತು ಕುದುರೆಯ ಮುಂದೆ ಗಾಡಿಯನ್ನು ಕಟ್ಟಿದಹಾಗಾಗುತ್ತದೆ. ಮೂಲಭೂತವಾಗಿ ಎಷ್ಟು ಭೂಮಿ ಇದೆ, ಎಷ್ಟು ಜನ ಭೂಹೀನ ರೈತರು ಇದ್ದಾರೆ ಎನ್ನುವ ಅಂಕಿ ಅಂಶಗಳನ್ನು ಈ ಸಭೆಯಮುಂದೆ ಇಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಇರುವ ಪರಿಸ್ಥಿತಿಯಲ್ಲಿ ಕುದುರೆ ಮುಂದೆ ಗಾಡಿ ಇದೆಯೋ, ಗಾಡಿಮುಂದೆ ಕುದುರೆ ಇದೆಯೋ ಗೊತ್ತಿಲ್ಲ. ಆದರೆ ಈಗ ಆ ಅಂಕಿ ಅಂಶಗಳು ಇಲ್ಲ. ಈಗ ಹಾಲಿ ಎಷ್ಟು ಭೂಮಿ ಇದೆ, ಎಷ್ಟು ಜನ ಭೂಹೀನ ರೈತರು ಇದ್ದಾರೆ ಎನ್ನುವ ಅಂಕಿಅಂಶಗಳನ್ನೆಲ್ಲಾ ಸಂಗ್ರಹ ಮಾಡುತ್ತಿದ್ದಾರೆ.

ಶ್ರೀ ಟಿ. ಎಂ. ಮಂಜುನಾಥ್.—ಈಗ ತಾವು ಭೂಮಿತಿಯ ಕಾನೂನನ್ನು ತರುತ್ತೀರಿ, ಇದು ಸಂತೋಷ. ಸೀಲಿಂಗ್ ಲಿಮಿಟಿಗಿಂತ ಹೆಚ್ಚಾಗಿರುವ ಭೂಮಿಯನ್ನು ಸರ್ಕಾರದ ವಶದಲ್ಲಿ ಇಟ್ಟುಕೊಳ್ಳುತ್ತೀರಾ ಅಥವಾ ಯಾವರೀತಿ ಮಾಡುತ್ತೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಭೂಸುಧಾರಣೆಯ ವಿಧೇಯಕವನ್ನು ಓದಿ ತಿಳಿದುಕೊಂಡರೆ ಅದು ಸ್ಪಷ್ಟವಾಗಿ ಗೊತ್ತಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ನಮಗೆ ಸ್ವಾತಂತ್ರ್ಯ ಬಂದು 25 ವರ್ಷಗಳಾದರೂ ಪ್ರತಿ ತಾಲ್ಲೂಕಿನಲ್ಲಿ ಭೂಹೀನ ರೈತರ ಕುಟುಂಬಗಳು ಎಷ್ಟು ಇವೆ, ಎಷ್ಟು ಭೂಮಿ ಇದೆ ಎನ್ನುವ ಅಂಕಿ ಅಂಶಗಳನ್ನು ಸಂಗ್ರಹಣೆ ಮಾಡಿಲ್ಲ. ಆದ್ದರಿಂದ ಈಗಲಾದರೂ ಸಮಗ್ರ ಭೂಸುಧಾರಣೆಯನ್ನು ತರುವುದಕ್ಕೆ ಮೊದಲು ಆ ಅಂಕಿ ಅಂಶಗಳನ್ನು ಸಿದ್ಧಗೊಳಿಸಿ ಅನಂತರ ಸಮಗ್ರವಾದ ಭೂಸುಧಾರಣೆಯ ತಿದ್ದುಪಡಿ ಮಸೂದೆಯನ್ನು ತರುತ್ತೀರಾ ?

ಶ್ರೀ ಪಿ. ಎಂ. ಬಂಗಿ.—ಈಗ ಇರುವ ಭೂಸುಧಾರಣಾ ಕಾನೂನಿನ 63 ನೇ ಸೆಕ್ಷನ್ ಪ್ರಕಾರ ಎರಿಯಾ ಲ್ಯಾಂಡ್ ರಾರ್ಡ್‌ಗಳೂ ಡಿಕ್ಲರೇಷನ್ ಕೊಟ್ಟಿದ್ದಾರೆ. ಮತ್ತು ಎರಿಯಾ ತಹಶೀಲ್ದಾರರು ಸರ್‌ಪ್ಲಸ್ ಲ್ಯಾಂಡನ್ನು ಜಾಹಿರಾತು ಮಾಡಿದ್ದಾರೆ. ಆದ್ದರಿಂದ ಆ ಅಂಕಿ ಅಂಶಗಳನ್ನು ಕೊಡುವುದಕ್ಕೆ ಅಡಚಣೆ ಏನಿದೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರ ಪ್ರಶ್ನೆಗೆ ಹಿಂದೆಯೇ ನಾನು ಉತ್ತರವನ್ನು ಹೇಳಿದ್ದೇನೆ. ಬಿಜಾಪುರ ಜಿಲ್ಲೆಯಲ್ಲಿ ಮಾತ್ರ ಸ್ವಲ್ಪಮಟ್ಟಿಗೆ ಭೂಸುಧಾರಣಾ ಕಾನೂನಿನ 64 ನೇ ಸೆಕ್ಷನ್ ಪ್ರಕಾರ ಲ್ಯಾಂಡ್ ಲಾರ್ಡ್ ಡಿಕ್ಲರೇಷನ್ ಮಾಡಿಕೊಂಡಿದ್ದಾರೆ. ಆದ್ದರಿಂದ ಅಲ್ಲಿ ಒಂದು ಕಡೆ ಮಾತ್ರ ಆ ಅಂಕಿಅಂಶಗಳು ಗೊತ್ತಾಗಿವೆ. ಬೇರೆ ಜಿಲ್ಲೆಗಳಲ್ಲಿ ಈ ಡಿಕ್ಲರೇಷನ್ ಮಾಡಿಕೊಳ್ಳಲಿಲ್ಲ. ಆ ಬಗ್ಗೆ ಮುಂದಿನ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಆದ್ದರಿಂದ ಆ ಅಂಕ ಅಂಶಗಳನ್ನು ಸಂಗ್ರಹಿಸಲಿಲ್ಲ.

Sri B. B. SAYANAK.—Madam Speaker, I want to put my supplementary in Marathi. I want to know whether there is a Reporter who could take down in Marathi ?

MADAM SPEAKER.—No.

Sri B. B. SAYANAK.—If that is so, I stage a walkout in protest.

(*Hon. Member Sri B. B. Sayanak withdrew from the House.*)

Sri N. B. SIRDESAI.—In spite of our repeated requests, Government has not appointed a Marathi Reporter.

MADAM SPEAKER.—We could not find one such Reporter and therefore we could not appoint.

Sri.N. B. SIRDESAI.—In protest, I am also staging a walk-out.

(*Hon. Member Sri N. B. Sirdesai withdrew from the House.*)

Sri P. A. PAWASHE.—(Hindi).

(*Hon. Member Sri P. A. Pawashe also withdrew from the House.*)

ಶ್ರೀಮತಿ ರೇಣುಕಾ ರಾಜೇಂದ್ರನ್.—ಗೇಣಿದಾರರಿಗೆ ನೇರವಾಗಿ ಎಷ್ಟು ಹಣ ಪರಿಹಾರ ದೊರೆಯುತ್ತದೆ, ಅದನ್ನು ಸರ್ಕಾರದವರು ಪಡೆಯುತ್ತಾರೆಯೋ ಅಥವಾ ಭೂಮಾಲೀಕರು ಪಡೆಯುತ್ತಾರೆಯೋ ಎಂಬುದನ್ನು ಹೇಳಬೇಕ .

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಇರತಕ್ಕ ಕಾನೂನಿನಲ್ಲಿ ಗೇಣಿದಾರರಿಗೆ ಮಾಲೀಕತ್ವವನ್ನು ಕೊಟ್ಟಮೇಲೆ ಸರ್ಕಾರಕ್ಕೆ ಎಷ್ಟು ಕೊಡಬೇಕು, ಮತ್ತು ಭೂಮಾಲೀಕರಿಗೆ ಎಷ್ಟು ಕೊಡಬೇಕು ಎಂದು ನಿರ್ಧಾರವಾಗಿದೆ.

Sri H. LINGAREDDY.—Why such a long delay is there in collecting data for Questions (*b*), (*c*), (*e*) and (*f*) though there was enough time for the Government to collect data ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದನ್ನು ಸಂಗ್ರಹಿಸಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಯಾವ ಕಾರಣವಿಂದ ಅದನ್ನು ಸಂಗ್ರಹಿಸುವುದಕ್ಕೆ ಆಗಲಿಲ್ಲ ಎನ್ನುವುದನ್ನು ಈ ಸಮಯದಲ್ಲಿ ಹೇಳುವುದಕ್ಕಾಗುವುದಿಲ್ಲ.

Schools without Kannada Medium

558. Sri KONANDUR LINGAPPA (Thirthahalli).—

Will the Minister for Education be pleased to state :—

(*a*) the number of Nursery, Primary, Middle and the High Schools in the State without Kannada medium and their location :